## 2017 ಕ.ತೀ.ವ. 501

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್
ಹಾಗೂ
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ ಹರೀಶ್ ಕುಮಾರ್

**ಶಾಂತವ್ವ ಮತ್ತು ಮತ್ತೊಬ್ಬರು –ವಿರುದ್ಧ– ಆನಂದ ಮತ್ತು ಮತ್ತೊಬ್ಬರು***

1988ರ ಮೋಟಾರು ವಾಹನ ಅಧಿನಿಯಮ ಕಲಂ 173(1)ರ ಅಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.

ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯ ಹೆಂಡತಿ ಮತ್ತು ಮಗುವಿನ ಕ್ಲೇಮು ಅರ್ಜಿಯನ್ನು ಪರಿಗಣಿಸಿ ಐತೀರ್ಪನ್ನು ಹೊರಡಿಸಿದ ನ್ಯಾಯಾಧಿಕರಣದ ಕ್ರಮವನ್ನು ಪ್ರಶ್ನಿಸಿ, ಪರಿಹಾರ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಸದರಿ ಸಂಕೀರ್ಣ ಮೊದಲನೇ ಮೇಲ್ಮನವಿ.

ವಿವಿಧ ಶೀರ್ಷಿಕೆಗಳಡಿಯಲ್ಲಿ ಪರಿಹಾರವನ್ನು ಪರಿಗಣಿಸಿದ ಉಚ್ಚ ನ್ಯಾಯಾಲಯವು ಪರಿಹಾರ ಮೊತ್ತವನ್ನು ರೂ.11,37,091/– ರಿಂದ ರೂ.15,17,308/– ಗಳಿಗೆ ಹೆಚ್ಚಿಸಿ ಶೇ.6ರಷ್ಟು ವಾರ್ಷಿಕ ಬಡ್ಡಿಯೊಂದಿಗೆ ಪರಿಹಾರ ಮೊತ್ತವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶಿಸುತ್ತಾ, ಸದರಿ ಮೇಲ್ಮನವಿಯನ್ನು ಪುರಸ್ಕರಿಸಿದೆ.

* ಸಂಕೀರ್ಣ ಮೊದಲನೇ ಮೇಲ್ಮನವಿ ಸಂಖ್ಯೆ.: 101018/2015 (ಎಂವಿ), ದಿನಾಂಕ: 9ನೇ ಡಿಸೆಂಬರ್, 2016.

| ***ಉಲ್ಲೇಖಿಸಲಾದ ಮೊಕದ್ದಮೆಗಳು:*** | ***ಪ್ಯಾರಾಗಳಲ್ಲಿ*** |
|---|---|
| *1. (1994) 2 ಎಸ್‌ಸಿಸಿ 176<br>ಜನರಲ್ ಮ್ಯಾನೇಜರ್, ಕೇರಳ ಸ್ಟೇಟ್ ರೋಡ್<br>ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್, ತ್ರಿವೇಂಡ್ರಮ್<br>–ವಿರುದ್ಧ– ಸೂಸಮ್ಮ ಥಾಮಸ್ ಮತ್ತು ಇತರರು* | *(ಉಲ್ಲೇ) 5* |
| *2. (1996) 4 ಎಸ್‌ಸಿಸಿ 362<br>ಯು.ಪಿ. ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್<br>ಕಾರ್ಪೊರೇಷನ್ ಮತ್ತು ಇತರರು –ವಿರುದ್ಧ–<br>ತ್ರಿಲೋಕ್ ಚಂದ್ರ ಮತ್ತು ಇತರರು* | *(ಉಲ್ಲೇ) 5* |
| *3. (2013) 9 ಎಸ್‌ಸಿಸಿ 65<br>ರೇಷ್ಮ ಕುಮಾರಿ ಮತ್ತು ಇತರರು –ವಿರುದ್ಧ–<br>ಮದನ್ ಮೋಹನ್ ಮತ್ತು ಇನ್ನೊಬ್ಬರು* | *(ಉಲ್ಲೇ) 5* |
| *4. (2013) 9 ಎಸ್‌ಸಿಸಿ 54<br>ರಾಜೇಶ್ ಮತ್ತು ಇತರರು –ವಿರುದ್ಧ–<br>ರಾಜ್‌ಬೀರ್ ಸಿಂಗ್ ಮತ್ತು ಇತರರು* | *(ಉಲ್ಲೇ) 5* |
| *5. (2015) 9 ಎಸ್‌ಸಿಸಿ 166<br>ನ್ಯಾಷನಲ್ ಇನ್ಶ್ಯೂರೆನ್ಸ್ ಕಂಪನಿ ಲಿಮಿಟೆಡ್<br>–ವಿರುದ್ಧ– ಪುಷ್ಪ ಮತ್ತು ಇತರರು* | *(ಉಲ್ಲೇ) 5* |
| *6. (2015) ಎಸಿಜೆ 1239<br>ಶಶಿಕಲ ಮತ್ತು ಇತರರು<br>–ವಿರುದ್ಧ– ಗಂಗಲಕ್ಷ್ಮಮ್ಮ ಮತ್ತು ಮತ್ತೊಬ್ಬರು* | *(ಉಲ್ಲೇ) 5* |

7. *(2015) 6 ಎಸ್‌ಸಿಸಿ 347*
*ಮುನ್ನಾಲಾಲ್ ಜೈನ್ ಹಾಗೂ ಮತ್ತೊಬ್ಬರು*
*–ವಿರುದ್ಧ– ವಿಪಿನ್ ಕುಮಾರ್*
*ಶರ್ಮ ಮತ್ತು ಇತರರು (ಉಲ್ಲೇ) 11*

8. *(2000)6 ಎಸ್‌ಸಿಸಿ 121*
*ಸರಳ ವರ್ಮ (ಶ್ರೀಮತಿ) ಹಾಗೂ ಇತರರು –ವಿರುದ್ಧ–*
*ದೆಹಲಿ ಸಾರಿಗೆ ನಿಗಮ ಮತ್ತು ಮತ್ತೊಬ್ಬರು (ಉಲ್ಲೇ) 13*

ಅರ್ಜಿದಾರರ ಪರ: ಶ್ರೀ ಹರೀಶ್ ಎಸ್. ಮೈಗೂರ್ ಹಾಗೂ ಕೆ.ಹೆಚ್. ಮುಲ್ಲಾ, ವಕೀಲರು ;
ಪ್ರತ್ಯರ್ಜಿದಾರರ ಪರ : ಶ್ರೀ ಅಶೋಕ್ ಟಿ. ಕಟ್ಟಿಮನಿ, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ರಾಘವೇಂದ್ರ ಎಸ್. ಚೌಹಾಣ್:**

ವಾಹನ ಅಪಘಾತದಲ್ಲಿ ತನ್ನ ಪತಿಯನ್ನು ಕಳೆದುಕೊಂಡ ವಿಧವೆ ಪತ್ನಿ ಹಾಗೂ ತಂದೆಯನ್ನು ಕಳೆದುಕೊಂಡ ಮಗು ಇವರುಗಳು ಎಂವಿಸಿ ಸಂಖ್ಯೆ: 439/2013ರಲ್ಲಿ 04.03.2015ರಂದು ಮೊದಲ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ ಹಾಗೂ ಹೆಚ್ಚುವರಿ ಎಂಎಸಿಟಿ, ಧಾರವಾಡ ಇವರು ಐತೀರ್ಪಿನ ಮೂಲಕ ನೀಡಿದ ಪರಿಹಾರವನ್ನು ಈ ನ್ಯಾಯಾಲಯವು ಹೆಚ್ಚಿಸುತ್ತದೆಂಬ ಭರವಸೆಯೊಂದಿಗೆ, ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ.

2. ಪ್ರಕರಣದ ಸಂಕ್ಷಿಪ್ತ ವಾಸ್ತವಾಂಶಗಳು ಈ ಮುಂದಿನಂತಿರುತ್ತವೆ. 14.02.2013ರಂದು ರಾತ್ರಿ 9.45ರ ವೇಳೆಗೆ ಅಪೀಲುದಾರ ಸಂ.1 ರ ಪತಿ ಹಾಗೂ

ಅಪೀಲುದಾರ ಸಂ.2 ತಂದೆಯಾಗಿದ್ದು ಗಾಡಿಗೆಪ್ಪ ಎಂಬ ವ್ಯಕ್ತಿ, ರಾತ್ರಿ ಊಟವನ್ನು ಮುಗಿಸಿಕೊಂಡು ತನ್ನ ಗೆಳೆಯರೊಂದಿಗೆ ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಗೆಳೆಯರ ಗುಂಪು ಹುಬ್ಬಳ್ಳಿ – ಲಕ್ಷ್ಮೇಶ್ವರ ರಸ್ತೆಯ ಮೇಲಿನ ಆಧಾರ ಗುಂಚಿ ಸೇತುವೆಯ ಬಳಿ ಬಂದಾಗ, ಇದ್ದಕ್ಕಿದ್ದ ಹಾಗೆ, ಕೆಎ–22/ಬಿ–2496 ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಲಾರಿಯವನು ಹುಬ್ಬಳ್ಳಿ ಕಡೆಯಿಂದ, ಅತ್ಯಂತ ವೇಗವಾಗಿ ನಿರ್ಲಕ್ಷ್ಯದಿಂದ ಹಾಗೂ ಅಸಡ್ಡೆಯಿಂದ ಲಾರಿ ಚಾಲಕ ಚಾಲನೆ ಮಾಡುತ್ತಾ ಬಂದು, ಗಾಡಿಗೆಪ್ಪನಿಗೆ ಡಿಕ್ಕಿ ಹೊಡೆದಿರುತ್ತಾನೆ. ಇದರಿಂದ ಗಂಭೀರ ಸ್ವರೂಪದ ಗಾಯಗಳು ಉಂಟಾಗಿದ್ದು, ಈತನನ್ನು ಹುಬ್ಬಳಿಯಲ್ಲಿನ ಕಿಮ್ಸ್ ಆಸ್ಪತ್ರೆಗೆ ಕೂಡಲೇ ಸ್ಥಳಾಂತರಿಸಲಾಗಿರುತ್ತದೆ. ತರುವಾಯ, ಈತನನ್ನು ಚಿಕಿತ್ಸೆಗಾಗಿ ಹುಬ್ಬಳ್ಳಿಯಲ್ಲಿನ ಲೈಫ್‌ಲೈನ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಗಿರುತ್ತದೆ. ಆದಾಗ್ಯೂ, ಹದಿನೈದು ದಿವಸಗಳ ವೈದ್ಯಕೀಯ ಚಿಕಿತ್ಸೆಯ ತರುವಾಯ ಚಿಕಿತ್ಸೆಗೆ ಸ್ಪಂದಿಸದೆ ಗಾಡಿಗೆಪ್ಪ ಗಾಯಗಳಿಗೆ ಬಲಿಯಾಗಿ ಅಸುನೀಗಿರುತ್ತಾನೆ.

3. ಅಪೀಲುದಾರರು, ತಮ್ಮ ಕುಟುಂಬದ ಏಕೈಕ ಅನ್ನದಾತನನ್ನು ಕಳೆದುಕೊಂಡಿದ್ದು, ಅವರು ಮಾನ್ಯ ನ್ಯಾಯಾಧಿಕರಣದ ಮುಂದೆ ಕ್ಲೇಮು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅವರ ವಾದವನ್ನು ರುಜುವಾತುಪಡಿಸುವಲ್ಲಿ, ಅಪೀಲುದಾರ ಸಂ.1ನ್ನು ಸ್ವತಃ ಪ್ರಾ.ಸಾ.1 ಆಗಿ ಪರೀಕ್ಷೆಗೊಳಗಾಗಿರುತ್ತಾರೆ, ಹನ್ನೆರಡು ದಸ್ತಾವೇಜುಗಳನ್ನು ಸಲ್ಲಿಸಲಾಗಿರುತ್ತದೆ. ಇನ್ಶೂರೆನ್ಸ್ ಕಂಪನಿ ಯಾವುದೇ ಸಾಕ್ಷ್ಯವನ್ನು ಪರಿಶೀಲಿಸಿರುವುದಿಲ್ಲ. ಆದರೆ ಇನ್ಶೂರೆನ್ಸ್ ಪಾಲಿಸಿಯನ್ನು ದಸ್ತಾವೇಜಿನಂತೆ ಸಲ್ಲಿಸಲಾಗಿರುತ್ತದೆ. ಮೌಖಿಕ ಹಾಗೂ ದಸ್ತಾವೇಜೀಯ ಸಾಕ್ಷ್ಯವನ್ನು ಪರಿಶೀಲಿಸಿದ ತರುವಾಯ, ಮಾನ್ಯ ನ್ಯಾಯಾಧಿಕರಣವು, ಅರ್ಜಿ ಸಲ್ಲಿಸಿದ ದಿನಾಂಕದಿಂದ ನಗದೀಕರಣದ ದಿನಾಂಕದವರೆಗೆ ವಾರ್ಷಿಕ ಶೇ.6ರ ದರದಲ್ಲಿನ ಬಡ್ಡಿಯೊಂದಿಗೆ ಅಪೀಲುದಾರರಿಗೆ 11,37,091/– ರೂ.ಗಳ ಪರಿಹಾರವನ್ನು ನೀಡಿರುತ್ತದೆ. ಹಾಗಾಗಿ, ಅದರ ಹೆಚ್ಚಳಕ್ಕಾಗಿ ಈ ನ್ಯಾಯಾಲಯದ ಎದುರು ಅಪೀಲನ್ನು ಸಲ್ಲಿಸಲಾಗಿರುತ್ತದೆ.

4. ಶ್ರೀಯುತ ಹರೀಶ್ ಮೈಗೂರ್, ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು, ಈ ನ್ಯಾಯಾಲಯದ ಎದುರು ಈ ಮುಂದಿನ ವಾದಗಳನ್ನು ಪ್ರಸ್ತಾಪಿಸಿರುತ್ತಾರೆ:–

ಮೊದಲನೆಯದಾಗಿ, ಅಪೀಲುದಾರರು, ಗಾಡಿಗೆಪ್ಪ ಗುತ್ತಿಗೆದಾರನಾಗಿ ಕಾರ್ಯ ನಿರ್ವಹಿಸುತ್ತಿದ್ದು, ತಿಂಗಳಿಗೆ 25,000/– ರೂ.ಗಳನ್ನು ಗಳಿಕೆ ಮಾಡುತ್ತಿದ್ದನೆಂದು ವಾದಿಸಿದ್ದಾಗ್ಯೂ, ಗುತ್ತಿಗೆದಾರನಂತೆ ಈತ ನೋಂದಣಿ ಮಾಡಿಸಿಕೊಂಡಿದ್ದನೆಂದು ಸ್ಪಷ್ಟವಾಗಿ ಸೂಚಿಸಿರುವ ನಿಶಾನೆ ಪಿ.9 ಹಾಗೂ ನಿಶಾನೆ ಪಿ.10ನ್ನು ಸಲ್ಲಿಸಿದ್ದಾಗ್ಯೂ, ಮಾನ್ಯ ನ್ಯಾಯಾಧಿಕರಣವು ಸದರಿ ದಸ್ತಾವೇಜುಗಳನ್ನು ನಂಬಿರುವುದಿಲ್ಲವೆಂದು ವಾದಿಸಲಾಗಿರುತ್ತವೆ. ಇದೂ ಅಲ್ಲದೆ, ಮಾನ್ಯ ನ್ಯಾಯಾಧಿಕರಣವು ತಿಂಗಳಿಗೆ ಕೇವಲ 7,000/–ರೂ.ಗಳ ಅದಾಯವನ್ನು ಗಳಿಸುತ್ತಿದ್ದನೆಂದು ನಿರ್ಧರಿಸಿರುತ್ತದೆ. ಹಾಗಾಗಿ, ಆದಾಯದ ಈ ನಿರ್ಧರಣೆಯ ಹೆಚ್ಚಿನ ಅಂತರವನ್ನು ಹೊಂದಿರುತ್ತದೆ.

ಎರಡನೆಯದಾಗಿ, ಆತ ಸ್ವಯಂ ಉದ್ಯೋಗಿಯಾಗಿರುವುದರಿಂದ, ಈತ 41 ವರ್ಷಗಳ ವಯೋಮಾನದವನಾಗಿರುವುದರಿಂದ, ಮಾನ್ಯ ನ್ಯಾಯಾಧಿಕರಣವು, ಅವಲಂಬನೆಯ ನಷ್ಟದ ಪ್ರವರ್ಗದಡಿಯಲ್ಲಿ ಅಪೀಲುದಾರರು ತೊಂದರೆ ಪಡುವ ಭವಿಷ್ಯದ ಆದಾಯದ ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರವನ್ನು ನೀಡುವ ಅಗತ್ಯವಿರುತ್ತದೆ. ಆದಾಗ್ಯೂ ಅಪೀಲುದಾರರಿಗೆ, ಅವರು ತೊಂದರೆ ಅನುಭವಿಸುವ ಭವಿಷ್ಯದ ಆದಾಯದ ನಷ್ಟಕ್ಕೆ ಸಂಬಂಧಿಸಿದಂತೆ ಒಂದೇ ಒಂದು ಪೈಸೆಯನ್ನು ನೀಡಿರುವುದಿಲ್ಲ. ಹಾಗಾಗಿ, ಅವಲಂಬನೆ ನಷ್ಟವನ್ನು ಲೆಕ್ಕ ಹಾಕುವುದಕ್ಕೆ ಸಂಬಂಧಿಸಿದ ಮೂಲ ವಾದವನ್ನೇ ಬದಲಾವಣೆ ಮಾಡಬೇಕಾದ ಅವಶ್ಯಕತೆ ಇರುತ್ತದೆ; ಈ ಪ್ರವರ್ಗದಲ್ಲಿನ ಪರಿಹಾರವನ್ನು, ಈ ನ್ಯಾಯಾಲಯವು ಮರು–ಲೆಕ್ಕಾಚಾರ ಮಾಡಬೇಕಾದ ಅಗತ್ಯವಿರುತ್ತದೆ ಎಂದೂ ಸಹಾ ನಿವೇದಿಸಿರುತ್ತಾರೆ.

ಮೂರನೆಯದಾಗಿ, ಅಪೀಲುದಾರ ಸಂ.2 ತಂದೆ–ತಾಯಿಯರ ಅವಶ್ಯಕತೆ ಹೆಚ್ಚೇ ಇರುವಂಥ ಹದಿನಾರು ವರ್ಷ ವಯೋಮಾನದ ಚಿಕ್ಕ ಹುಡುಗನೇ ಆಗಿದ್ದು,

ಈ ವಯಸ್ಸಿನಲ್ಲಿ ಈತ ತನ್ನ ತಂದೆಯನ್ನು ಕಳೆದುಕೊಂಡಿರುತ್ತಾನೆ. ಈ ಹಿನ್ನೆಲೆಯಲ್ಲಿ ನ್ಯಾಯಾಧಿಕರಣವು ಪ್ರೀತಿ ಹಾಗೂ ವಾತ್ಸಲ್ಯದ ನಷ್ಟಕ್ಕೆ ಸಂಬಂಧಿಸಿದಂತೆ ಯಾವುದೇ ಪರಿಹಾರವನ್ನು ನೀಡಲು ವಿಫಲವಾಗಿರುತ್ತದೆ. ಆದ್ದರಿಂದ ಅಪೀಲುದಾರ ಸಂ.2ರ ಹಿತಾಸಕ್ತಿಯನ್ನು ಮಾನ್ಯ ನ್ಯಾಯಾಧಿಕರಣವು ಸಂಪೂರ್ಣವಾಗಿ ಅಲಕ್ಷಿಸಿರುತ್ತದೆ.

ನಾಲ್ಕನೆಯದಾಗಿ, ಅಪೀಲುದಾರ ಸಂ.1 ಸುಮಾರು 40 ವರ್ಷಗಳ ಮಧ್ಯವಯಸ್ಕಳಾಗಿದ್ದು, ಈಕೆ ಕನಿಷ್ಠ 30 ವರ್ಷಗಳ ಕಾಲ ತನ್ನ ಪತಿಯ ಸಾಂಗತ್ಯ, ಪ್ರೀತಿ – ಪ್ರೇಮ – ವಿಶ್ವಾಸಗಳಿಲ್ಲದೆ ಬದುಕಬೇಕಾಗಿದ್ದು, 'ಸಾಂಗತ್ಯ ನಷ್ಟ' ಶೀರ್ಷಿಕೆಯಡಿಯಲ್ಲಿ ನ್ಯಾಯಾಧಿಕರಣವು ಕೇವಲ 20,000/– ರೂ.ಗಳ ಮೊಬಲಗನ್ನು ನೀಡಿರುತ್ತದೆ. ಆದ್ದರಿಂದ, ಸದರಿ ಶೀರ್ಷಿಕೆಯಡಿಯಲ್ಲಿನ ಪರಿಹಾರವನ್ನು ಹೆಚ್ಚಿಸಬೇಕಾದ ಅಗತ್ಯವಿರುತ್ತದೆ.

ಐದನೆಯದಾಗಿ, ಅಪಘಾತವು ಫೆಬ್ರವರಿ 2013ರಲ್ಲಿ ಸಂಭವಿಸಿದ್ದು, ಶವದ ಸಾಗಣೆ, ಅಂತ್ಯಸಂಸ್ಕಾರ ಹಾಗೂ ಉತ್ತರಾಧಿ ಕ್ರಿಯೆಗಳ ಶೀರ್ಷಿಕೆಯಡಿಯಲ್ಲಿ ಕೇವಲ 10,000/– ರೂ.ಗಳನ್ನು ಮಾನ್ಯ ನ್ಯಾಯಾಧಿಕರಣವು ನೀಡಿದ್ದು, ಹಣದುಬ್ಬರದ ದರಗಳು ಹಾಗೂ ದಿನಬಳಕೆ ವಸ್ತುಗಳ ಬೆಲೆಯ ಏರಿಕೆಗಳನ್ನು ಪರಿಗಣಿಸಿದಾಗ, ಸದರಿ ಶೀರ್ಷಿಕೆಯಡಿಯಲ್ಲಿ ನೀಡಿದ ಪರಿಹಾರವು ಅತ್ಯಲ್ಪದ್ದಾಗಿರುತ್ತದೆ. ಹಾಗಾಗಿ, ಸದರಿ ಶೀರ್ಷಿಕೆಯಡಿಯಲ್ಲಿನ ಪರಿಹಾರವನ್ನು ಈ ನ್ಯಾಯಾಲಯವು ಹೆಚ್ಚಿಸಬೇಕಾದ ಅವಶ್ಯಕತೆ ಇರುತ್ತದೆ.

5. ಮತ್ತೊಂದು ಕಡೆ, ಇನ್ಶೂರೆನ್ಸ್ ಕಂಪನಿಯ ಪರ ಮಾನ್ಯ ನ್ಯಾಯವಾದಿಗಳು, ಮೊಟ್ಟಮೊದಲನೆಯದಾಗಿ, ನಿಶಾನೆ ಪಿ.9 ಹಾಗೂ ನಿಶಾನೆ ಪಿ.10, 2004–2005ನೇ ವರ್ಷಕ್ಕೆ ಸಂಬಂಧಿಸಿದ್ದೆಂದು ವಾದಿಸಿರುತ್ತಾರೆ. 2013ನೇ ವರ್ಷದಲ್ಲಿ ಅಪಘಾತವು ಉಂಟಾಗಿದ್ದು, ಗಾಡಿಗೆಪ್ಪ ಗುತ್ತಿಗೆದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರೆ ಅಥವಾ ಇಲ್ಲವೆ ಎಂಬುದು ಅಸ್ಪಷ್ಟವಾಗಿದೆಯೆಂದು ವಾದಿಸಿರುತ್ತಾರೆ. ಆದ್ದರಿಂದ ಮಾನ್ಯ ನ್ಯಾಯಾಧಿಕರಣವು, ಮಾನ್ಯ ನ್ಯಾಯಾಧಿಕರಣದ ಎದುರು ಸಲ್ಲಿಸಿದ ಎರಡು ನಿಶಾನೆಗಳನ್ನು ಪರಿಗಣಿಸದಿರುವುದು ಸಮರ್ಥನೀಯವಾಗಿರುತ್ತದೆಂದು ವಾದಿಸಿರುತ್ತಾರೆ.

ಎರಡನೆಯದಾಗಿ, ಅವಲಂಬನೆಯ ನಷ್ಟವನ್ನು ಲೆಕ್ಕಹಾಕುವಾಗ ಪ್ರತಿ ತಿಂಗಳಿಗೆ 7000/–ರೂ.ಗಳಂತೆ ಮೃತನ ಭಾವಿತ ಆದಾಯವನ್ನು ಪರಿಗಣನೆಗೆ ತೆಗೆದುಕೊಂಡಿರುವುದೂ ಸಹ ಸಮರ್ಥನೀಯವಾಗಿರುತ್ತದೆ.

ಮೂರನೆಯದಾಗಿ, 'ಭವಿಷ್ಯದ ಆದಾಯ ನಷ್ಟ' ಭರ್ತಿಯು ಸಂಬಂಧಪಡುವಷ್ಟರ ಮಟ್ಟಿಗೆ, ಮಾನ್ಯ ನ್ಯಾಯವಾದಿಗಳು, ಮೃತ ವ್ಯಕ್ತಿಯು ಗಳಿಸಿದ ಆದಾಯಕ್ಕೆ ಸಮನಾಗಿ, ಕ್ಲೇಮುದಾರರ ಹಿತಾಸಕ್ತಿಯನ್ನು ಈಡೇರಿಸುವಂತೆ ಸರಿಯಾದ ಪರಿಹಾರವನ್ನು ನೀಡಿರುವ ಸಂದರ್ಭಗಳಲ್ಲಿ, ಭವಿಷ್ಯದ ಆದಾಯ ನಷ್ಟ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂಬ ಅಭಿಪ್ರಾಯಕ್ಕೆ ಪೂರಕವಾಗಿ ***ಜನರಲ್ ಮ್ಯಾನೇಜರ್, ಕೇರಳ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್, ತ್ರಿವೇಂಡ್ರಮ್ –ವಿರುದ್ಧ– ಸೂಸಮ್ಮ ಥಾಮಸ್ ಮತ್ತು ಇತರರು*** [1], ಪ್ರಕರಣದಿಂದ ***ಯು.ಪಿ. ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಮತ್ತು ಇತರರು –ವಿರುದ್ಧ– ತ್ರಿಲೋಕ ಚಂದ್ರ ಮತ್ತು ಇತರರು*** [2], ಪ್ರಕರಣಗಳವರೆಗಿನ ತೀರ್ಪುಗಳ ಸರಣಿಯನ್ನು ಈ ನ್ಯಾಯಾಲಯವು ಪರಿಗಣಿಸಬೇಕೆಂದು ನಿವೇದಿಸಿಕೊಂಡಿರುತ್ತಾರೆ. ಅದೂ ಅಲ್ಲದೆ, ಮಾನ್ಯ ನ್ಯಾಯವಾದಿಗಳು 02.04.2013ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದ ***ರೇಷ್ಮ ಕುಮಾರಿ ಮತ್ತು ಇತರರು –ವಿರುದ್ಧ– ಮದನ್ ಮೋಹನ್ ಮತ್ತು ಇನ್ನೊಬ್ಬರು*** [3] ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠವು 'ಭವಿಷ್ಯದ ಆದಾಯ ನಷ್ಟ' ನೀಡಲು ನಿರಾಕರಿಸಿರುತ್ತದೆಂದು ವಾದಿಸಿರುತ್ತಾರೆ. 12.04.2013ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ಪೂರ್ಣಪೀಠವು ***ರಾಜೇಶ್ ಅಂಡ್ ಅದರ್ಸ್ –ವಿರುದ್ಧ– ರಾಜ್‌ಬೀರ್ ಸಿಂಗ್ ಮತ್ತು ಇತರರು*** [4] ಪ್ರಕರಣದಲ್ಲಿ ಇದಕ್ಕೆ ವಿರುದ್ಧದ ಅಭಿಪ್ರಾಯವನ್ನು ತಳೆದಿದ್ದರೂ ಕೂಡ, ***ರಾಜೇಶ್ ಮತ್ತು ಇತರರು*** ಪ್ರಕರಣದಲ್ಲಿ ಅದೇ ವಾಸ್ತವಾಂಶಗಳು ಉಳಿದುಕೊಂಡಿದ್ದು, ***ರೇಷ್ಮ ಕುಮಾರಿ*** ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಗಮನಿಸಿಯೂ ಇರುವುದಿಲ್ಲ. ***ರಾಜೇಶ್ ಮತ್ತು ಇತರರು***

1. (1994) 2 ಎಸ್‌ಸಿಸಿ 176
2. (1996) 4 ಎಸ್‌ಸಿಸಿ 362
3. (2013) 9 ಎಸ್‌ಸಿಸಿ 65
4. (2013) 9 ಎಸ್‌ಸಿಸಿ 54

(ಹಿಂದೆ ಹೇಳಿದ) ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಭವಿಷ್ಯದ ಆದಾಯದ ನಷ್ಟವನ್ನು ನೀಡಿದ್ದಾಗ್ಯೂ, ಸದರಿ ಪ್ರಕರಣದಲ್ಲಿ, ***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿರುವಂತೆ ಅಜಾಗರೂಕತೆಯಿಂದ ನೀಡಿದ ತೀರ್ಪೇ ಆಗಿದ್ದರೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ರೇಷ್ಮ ಕುಮಾರಿ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿನ ಈ ಮುಂಚಿನ ತೀರ್ಪನ್ನು ಗಮನಿಸಲು ವಿಫಲವಾಗಿರುತ್ತದೆ. ಇದೂ ಅಲ್ಲದೆ, ***ರೇಷ್ಮ ಕುಮಾರಿ*** (ಹಿಂದೆ ಹೇಳಿದ) ಹಾಗೂ ***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿ 02.07.2014ರಂದು ***ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಪುಷ್ಪ ಮತ್ತು ಇತರರು*** [5] ಪ್ರಕರಣದಲ್ಲಿ ಒಳಗೊಂಡ ವೈರುದ್ಯಗಳನ್ನು ಪರಿಗಣಿಸಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ವಿಸ್ತೃತ ಪೀಠದ ಮುಂದೆ ಭವಿಷ್ಯಕ್ಕೆ ಸಂಬಂಧಿಸಿದಂತೆ ಆದಾಯದ ಸೇರ್ಪಡೆಯನ್ನು ಪರಿಗಣಿಸಬೇಕೆ ಅಥವಾ ಬೇಡವೆ ಎಂಬುದನ್ನು ಉಲ್ಲೇಖಿಸಿರುತ್ತದೆ. ಅಂತೆಯೇ, ***ಶಶಿಕಲ ಮತ್ತು ಇತರರು –ವಿರುದ್ಧ– ಗಂಗಲಕ್ಷ್ಮಮ್ಮ ಮತ್ತು ಮತ್ತೊಬ್ಬರು*** [6] ಪ್ರಕರಣದಲ್ಲಿ, ಮತ್ತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮಾನ್ಯ ವಿಭಾಗೀಯ ಪೀಠಕ್ಕೆ ಈ ವಿಷಯವನ್ನು ಉಲ್ಲೇಖಿಸಿರುತ್ತದೆ. ಸದರಿ ವಿಷಯವು, ವಿಸ್ತೃತ ಪೀಠದ ಮುಂದೆ ಇತ್ಯರ್ಥಕ್ಕಾಗಿ ಮುಂದುವರೆದಿದೆ. ಸರ್ವೋಚ್ಚ ನ್ಯಾಯಾಲಯದ ವಿಸ್ತೃತ ಪೀಠದ ಎದುರು ಸದರಿ ವಿಷಯವು ಇತ್ಯರ್ಥದಲ್ಲಿರುವಾಗ, ಈ ನ್ಯಾಯಾಲಯವು, ಸದರಿ ವಿವಾದಾಂಶವನ್ನು ಪರಿಗಣಿಸಲೂ ಸಹ ಆಗುವುದಿಲ್ಲ. ಆದ್ದರಿಂದ, ಭವಿಷ್ಯದ ಆದಾಯ ನಷ್ಟವನ್ನು ಈ ಸಮಯದಲ್ಲಿ ಅಪೀಲುದಾರನಿಗೆ ನೀಡುವಂತಿರುವುದಿಲ್ಲ.

ನಾಲ್ಕನೆಯದಾಗಿ, 'ಸಾಂಗತ್ಯ ನಷ್ಟ' ಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಮಾನ್ಯ ನ್ಯಾಯವಾದಿಗಳು, 'ಅವಲಂಬಿತ ನಷ್ಟ'ಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪರಿಹಾರವನ್ನು ನೀಡಿದಲ್ಲಿ, ಆಗ ಮಾತ್ರ 'ಸಾಂಕೇತಿಕ ಪರಿಹಾರ'ವನ್ನು 'ಸಾಂಗತ್ಯ ನಷ್ಟಕ್ಕೆ' ಸಂಬಂಧಿಸಿದಂತೆ ನೀಡಬೇಕಾದ ಅಗತ್ಯವಿರುತ್ತದೆ. 'ಅವಲಂಬಿತ ನಷ್ಟ'ದ

5. (2015) 9 ಎಸ್‌ಸಿಸಿ 166

6. (2015) ಎಸಿಜೆ 1239

ಸಾಂಪ್ರದಾಯಿಕ ಶೀರ್ಷಿಕೆಯಡಿಯಲ್ಲಿ ಅಪೀಲುದಾರ ಸಂ.1ಗೆ 7,84,056/– ರೂ.ಗಳನ್ನು ಮೊಬಲಗನ್ನು ಈಗಾಗಲೇ ಸಂದಾಯ ಮಾಡಿರುವುದರಿಂದ, ಮಾನ್ಯ ನ್ಯಾಯಾಧಿಕರಣವು, 'ಸಾಂಗತ್ಯ ನಷ್ಟ' ಶೀರ್ಷಿಕೆಯಡಿಯಲ್ಲಿ 20,000/– ರೂ.ಗಳ ಸಾಂಕೇತಿಕ ಮೊಬಲಗನ್ನು ಆಕೆಗೆ ನೀಡಿರುವುದು ಸಮರ್ಥನೀಯವಾದುದಾಗಿರುತ್ತದೆ.

ಐದನೆಯದಾಗಿ, 'ಪ್ರೀತಿ ಹಾಗೂ ವಿಶ್ವಾಸದ ನಷ್ಟ' ಶೀರ್ಷಿಕೆಯಡಿಯಲ್ಲಿ ಅಪೀಲುದಾರ ಸಂ.2ಗೆ ಪರಿಹಾರವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಕೂಡ, ಇನ್‌ಶೂರೆನ್ಸ್ ಕಂಪೆನಿಯ ಪರ ಮಾನ್ಯ ನ್ಯಾಯವಾದಿಗಳು ವಿರೋಧ ವ್ಯಕ್ತಪಡಿಸಿರುತ್ತಾರೆ.

ಅಂತಿಮವಾಗಿ, ಮಾನ್ಯ ನ್ಯಾಯವಾದಿಗಳ ಪ್ರಕಾರ, ಮೃತರ ಆತ್ಮಕ್ಕೆ ಶಾಂತಿ ನೀಡಲು ಶವದ ಸಾಗಣೆ, ಅಂತ್ಯಸಂಸ್ಕಾರ ಹಾಗೂ ಉತ್ತರಾಧಿಕ್ರಿಯೆಗಳ ಶೀರ್ಷಿಕೆಯಡಿಯಲ್ಲಿ ನೀಡಿರುವ 10,000/– ರೂ.ಗಳ ಪರಿಹಾರವು ಸರಿಯಾದುದು ಹಾಗೂ ನ್ಯಾಯಯುತವಾದುದು ಆಗಿರುತ್ತದೆ. ಆದ್ದರಿಂದ ಮಾನ್ಯ ನ್ಯಾಯಾಧಿಕರಣವು ಹೊರಡಿಸಿರುವ ಪ್ರಶ್ನಿತ ಐತೀರ್ಪು ಸಮರ್ಥನೀಯವಾದುದಾಗಿರುತ್ತದೆಂದು ನಿವೇದಿಸಿರುತ್ತಾರೆ.

6. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿ, ಪ್ರಶ್ನಿತ ಐತೀರ್ಪನ್ನು ಪರಿಶೀಲಿಸಲಾಗಿರುತ್ತದೆ.

7. ಗಾಡಿಗೆಪ್ಪ 2004–05ನೇ ವರ್ಷದಲ್ಲಿ ಗುತ್ತಿಗೆದಾರನಾಗಿ ನೋಂದಣಿ ಮಾಡಿಕೊಂಡಿರುವುದನ್ನು ಸ್ಪಷ್ಟವಾಗಿ ಸೂಚಿಸುವಂಥ ನಿಶಾನೆ ಪಿ.9 ಹಾಗೂ ನಿಶಾನೆ ಪಿ.10 ಕುರಿತಂತೆ ಉದಾಹರಿಸದ ಸೀಮಿತತೆಯ ಮಟ್ಟಿಗೆ ಖಂಡಿತವಾಗಿಯೂ ಮಾನ್ಯ ನ್ಯಾಯಾಧಿಕರಣವು ಸಮರ್ಥನೀಯವಾಗಿರುತ್ತದೆ. 2013ನೇ ವರ್ಷದಲ್ಲಿ ಅಪಘಾತವು ಸಂಭವಿಸಿರುವುದರಿಂದ, ಮಾನ್ಯ ನ್ಯಾಯಾಧಿಕರಣವು, 2004 ಹಾಗೂ 2005ನೇ ವರ್ಷಗಳಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಉದಾಹರಿಸಿರುವುದಿಲ್ಲ.

8. ಆದಾಗ್ಯೂ, ದಸ್ತಾವೇಜೀಯ ಸಾಕ್ಷ್ಯದ ಕೊರತೆ ಇದ್ದಾಗ್ಯೂ, ಪಿ.ಡಬ್ಲ್ಯೂ.2 ಎಂದು ಗುರುತಾಗಿರುವ ಅಪೀಲುದಾರ ಸಂ.1ರ ಸಾಕ್ಷ್ಯವೂ, ಪಾಟೀ ಸವಾಲಿನಲ್ಲಿ ತೆಗೆದುಹಾಕುವಂತಿರುವುದಿಲ್ಲ. ಮುಖ್ಯ ವಿಚಾರಣೆಯಲ್ಲಿ, ಆಕೆ ತನ್ನ ಪತಿ ಗುತ್ತಿಗೆದಾರನೆಂದು ಸ್ಪಷ್ಟವಾಗಿ ಹೇಳಿರುತ್ತಾಳೆ. ಈ ಮೂಲಕ, ಈಕೆ ತನ್ನ ಪತಿಯು ಸ್ಥಾನಮಾನವನ್ನು ಗುತ್ತಿಗೆದಾರನಾಗಿ ಕಾರ್ಯನಿರ್ವಹಿಸುತ್ತಿದ್ದನೆಂಬುದನ್ನು ಸುಸ್ಥಾಪಿಸಿರುತ್ತಾಳೆ. ಆದಾಗ್ಯೂ, ಈಕೆ, ತನ್ನ ನಿರ್ಮಾಣ ಕಾರ್ಯದ ಮೂಲಕ ಈತ ಆದಾಯ ಗಳಿಸುತ್ತಿದ್ದನೆಂಬುದನ್ನು ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ, ಮಾನ್ಯ ನ್ಯಾಯಾಧಿಕರಣವು, ಗಾಡಿಗೆಪ್ಪ ಗುತ್ತಿಗೆದಾರನಾಗಿ ಗಳಿಸಿರಬಹುದಾದಂಥ ಭಾವಿತ ಆದಾಯವನ್ನು ತೆಗೆದುಕೊಳ್ಳುವಲ್ಲಿನ ಅದರ ಕ್ರಮವು ಸಮರ್ಥನೀಯವಾದುದಾಗಿರುತ್ತದೆ. 2013ನೇ ವರ್ಷಕ್ಕೆ ಸಂಬಂಧಿಸಿದಂತೆ ವ್ಯಕ್ತಿಯ ಭಾವಿತ ಆದಾಯವನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯವು ಬಳಸಿದ ಪರಿಶಿಷ್ಟದಲ್ಲಿ, ಆದಾಯವನ್ನು, ತಿಂಗಳಿಗೆ 7,000/– ರೂ.ಗಳಂತೆ ಭಾವಿಸಿ ಲೆಕ್ಕಹಾಕಲಾಗಿರುತ್ತದೆ. ಹಾಗಾಗಿ, ಮಾನ್ಯ ನ್ಯಾಯಾಧಿಕರಣವು, ತಿಂಗಳಿಗೆ 7,000/– ರೂ.ಗಳೆಂದು ಗಾಡಿಗೆಪ್ಪರ ಮಾಸಿಕ ಆದಾಯದಂತೆ ತೆಗೆದುಕೊಂಡಿರುವುದು ಸಮರ್ಥನೀಯವಾದುದಾಗಿರುತ್ತದೆ. ಆದ್ದರಿಂದ, ಈ ಮಟ್ಟಿಗೆ, ಮಾನ್ಯ ನ್ಯಾಯಾಧಿಕರಣವು ದೋಷಪೂರ್ಣವಾಗಿರುವುದಿಲ್ಲ. ಹಾಗಾಗಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಪ್ರಸ್ತಾಪಿಸಿದ ಮೊದಲ ವಾದವನ್ನು ಒಪ್ಪಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

9. ಆದಾಗ್ಯೂ, ಅಪೀಲುದಾರರಿಗೆ ಸಂಬಂಧಿಸಿದಂತೆ ನ್ಯಾಯಾಧಿಕರಣವು ಅವಲಂಬನ ನಷ್ಟವನ್ನು ಲೆಕ್ಕಹಾಕುವಾಗ, ಭವಿಷ್ಯದ ಆದಾಯದ ನಷ್ಟವನ್ನು ನಿರಾಕರಿಸಿರುವುದು ಸಮರ್ಥನೀಯವೇ ಎಂಬ ಅಂಶ ಈ ನ್ಯಾಯಾಲಯದ ಮುಂದಿರುವ ವಿಚಾರವಾಗಿದೆ. ***ರೇಷ್ಮ ಕುಮಾರಿ ಮತ್ತು ಇತರರು*** (ಹಿಂದೆ ಹೇಳಿದ) ಹಾಗೂ ***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು, ಸದರಿ ವಿವಾದಾಂಶದ ಬಗ್ಗೆ ವೈರುದ್ಯದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತದೆಂಬುದು ವಾಸ್ತವವಾದ ವಿಚಾರವಾಗಿರುತ್ತದೆ. ಆದಾಗ್ಯೂ,

***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿ ***ರೇಷ್ಮ ಕುಮಾರಿ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣವನ್ನು ಗಮನಿಸಿರುವುದಿಲ್ಲವೆಂಬ ಒಂದೇ ಕಾರಣಕ್ಕೆ ನಂತರದ ಪ್ರಕರಣಗಳಲ್ಲಿ ಈ ನ್ಯಾಯಾಲಯವು ಅಜಾಗರೂಕತೆಯಿಂದ ನಡೆದುಕೊಂಡಿದೆ ಎಂಬ ತೀರ್ಮಾನಕ್ಕೆ ಬರುವುದು ಸಾಧುವಾದುದಲ್ಲ. ಪ್ರಕರಣಗಳ ಸರಣಿಗಳಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ನ್ಯಾಯಿಕ ಶಿಸ್ತನ್ನು ಉಚ್ಚ ನ್ಯಾಯಾಲಯಗಳು ನಿರ್ವಹಿಸಬೇಕೆಂದು ನ್ಯಾಯಾಲಯಗಳಿಗೆ ಎಚ್ಚರಿಕೆ ನೀಡಿರುತ್ತದೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು ಅಜಾಗರೂಕತೆಯಿಂದ ಕೂಡಿದೆಯೆಂದು ಉಚ್ಚ ನ್ಯಾಯಾಲಯವು ಅಭಿಪ್ರಾಯಪಡಲು ಸಾಧ್ಯವಿರುವುದಿಲ್ಲ.

10. ನಿಸ್ಸಂಶಯವಾಗಿ, ***ನ್ಯಾಷನಲ್ ಇನ್ಶೂರೆನ್ಸ್ ಕಂಪನಿ*** (ಹಿಂದೆ ಹೇಳಿದ), ಹಾಗೂ ***ಶಶಿಕಲ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿ, ವಿವಾದಾಂಶವನ್ನು ಸರ್ವೋಚ್ಚ ನ್ಯಾಯಾಲಯದ ವಿಸ್ತೃತ ಪೀಠಕ್ಕೆ ಉಲ್ಲೇಖಿಸಲಾಗಿರುತ್ತದೆ. ಆದ್ದರಿಂದ, ವಿವಾದಾಂಶವು ಸರ್ವೋಚ್ಚ ನ್ಯಾಯಾಲಯದ ಪೀಠದ ಮುಂದೆ ಇತ್ಯರ್ಥದಲ್ಲಿರುವಾಗ, ಉಚ್ಚ ನ್ಯಾಯಾಲಯವು, ಅವಲಂಬನ ನಷ್ಟವನ್ನು ಲೆಕ್ಕ ಹಾಕುವಾಗ ಸದರಿ ವಿಷಯವನ್ನು ಪರಿಗಣಿಸುವುದರಿಂದ ಪ್ರತಿವಾರಿಸಬೇಕೆ, ಅಥವಾ ಬೇಡವೇ? ಎಂಬುದು ಪ್ರಶ್ನೆಯಾಗಿರುತ್ತದೆ.

11. ಈ ಸಂಬಂಧದಲ್ಲಿ, ***ಮುನ್ನಾಲಾಲ್ ಜೈನ್ ಹಾಗೂ ಮತ್ತೊಬ್ಬರು –ವಿರುದ್ಧ– ವಿಪಿನ್ ಕುಮಾರ್ ಶರ್ಮ ಮತ್ತು ಇತರರು*** [7] ಪ್ರಕರಣದಿಂದ ನೆರವನ್ನು ಪಡೆಯಬಹುದಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಸರ್ವೋಚ್ಚ ನ್ಯಾಯಾಲಯದ ಪೂರ್ಣಪೀಠವು, ***ರೇಷ್ಮ ಕುಮಾರಿ ಮತ್ತು ಇತರರು*** (ಹಿಂದೆ ಹೇಳಿದ), ಹಾಗೂ ***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣಗಳ ನಡುವೆ ವೈರುದ್ಯಗಳಿವೆಯೆಂಬುದನ್ನು ಸ್ಪಷ್ಟವಾಗಿ ಗಮನಿಸಿರುತ್ತದೆ. ಅಲ್ಲದೆ, ಪ್ರಸ್ತುತ

7. (2015) 6 ಎಸ್‌ಸಿಸಿ 347

ವಿವಾದಾಂಶವು, ಸರ್ವೋಚ್ಚ ನ್ಯಾಯಾಲಯದ ವಿಸ್ತೃತ ಪೀಠದ ಮುಂದೆ ಇತ್ಯರ್ಥದಲ್ಲಿದೆಯೆಂಬುದನ್ನೂ ಸಹ ಗಮನಿಸಲಾಗಿರುತ್ತದೆ. ಆದರೆ, ವಿಸ್ತೃತ ಪೀಠದ ಮುಂದೆ ವಿಷಯವು ಇತ್ಯರ್ಥದಲ್ಲಿದ್ದಾಗ್ಯೂ, ***ಮುನ್ನಾ ಲಾಲ್ ಜೈನ್*** (ಹಿಂದೆ ಹೇಳಿದ) ಪ್ರಕರಣವನ್ನು ಉದಾಹರಿಸಿದ್ದು, ಕ್ಲೇಮುದಾರರಿಗೆ 'ಭವಿಷ್ಯದ ಆದಾಯ ನಷ್ಟ' ಶೀರ್ಷಿಕೆಯಡಿಯಲ್ಲಿ ಸೌಲಭ್ಯವನ್ನು ಒದಗಿಸಿರುತ್ತದೆ. ಹಾಗಾಗಿ, ಸರ್ವೋಚ್ಚ ನ್ಯಾಯಾಲಯದ ವಿಸ್ತೃತ ಪೀಠದ ಮುಂದೆ ಪ್ರಸ್ತುತ ವಿವಾದಾಂಶವು ಇತ್ಯರ್ಥದಲ್ಲಿದ್ದಾಗ್ಯೂ, 'ಅವಲಂಬನ ನಷ್ಟ'ವನ್ನು ನಿರ್ಧರಿಸುವಾಗ ಭವಿಷ್ಯದ ಆದಾಯ ನಷ್ಟವನ್ನು 'ಅವಲಂಬನ ನಷ್ಟ'ವನ್ನು ಲೆಕ್ಕಹಾಕುವಲ್ಲಿ ಉಚ್ಚ ನ್ಯಾಯಾಲಯವು ತಳೆದ ನಿರ್ಧಾರವು ಸಮರ್ಥನೀಯವಾದುದಾಗಿರುತ್ತದೆಂದು ಕಂಡು ಬರುತ್ತದೆ.

12. ವಾಸ್ತವವಾಗಿ, ಪ್ರಕರಣಗಳ ಸರಣಿಯಲ್ಲಿ, ಈ ನ್ಯಾಯಾಲಯವು, ಆ ಪ್ರಕರಣಗಳಲ್ಲಿ ಕ್ಲೇಮುದಾರರು/ಅಪೀಲುದಾರರಿಗೆ ಸಂಬಂಧಿಸಿದ ಅವಲಂಬನ ನಷ್ಟವನ್ನು ಲೆಕ್ಕ ಹಾಕುವಾಗ, 'ಭವಿಷ್ಯದ ಆದಾಯ ನಷ್ಟ'ದ ಶೀರ್ಷಿಕೆಯಡಿಯಲ್ಲಿ ಪರಿಹಾರವನ್ನು ನೀಡುವ ದೃಷ್ಟಿಯಿಂದ ***ಮುನ್ನಾಲಾಲ್ ಜೈನ್*** (ಹಿಂದೆ ಹೇಳಿದ) ಪ್ರಕರಣವನ್ನು ಉದಾಹರಿಸಿರುತ್ತದೆ. ನ್ಯಾಯಿಕ ಶಿಸ್ತು, ಈ ಪೀಠವು, ಈ ನ್ಯಾಯಾಲಯದ ಸಮನ್ವಯ ಪೀಠಗಳು ವ್ಯಕ್ತಪಡಿಸಿದ ನ್ಯಾಯಿಕ ಆಲೋಚನೆಗಳನ್ನು ಅನುಸರಿಸಬೇಕೆಂಬುದನ್ನು ಅಗತ್ಯಪಡಿಸುತ್ತದೆ. ಆದ್ದರಿಂದ, ಈ ಪೀಠಕ್ಕೆ ಈ ನ್ಯಾಯಾಲಯದ ಮುಂದಿರುವ ಅಪೀಲುದಾರರಿಗೆ, ಭವಿಷ್ಯದ ಆದಾಯ ನಷ್ಟದ ಪ್ರವರ್ಗದಡಿಯಲ್ಲಿ ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವ ಹಾಗೂ ಪರಿಹಾರವನ್ನು ನೀಡುವ ಆಯ್ಕೆ ಇಲ್ಲದೆ, ಬೇರೆ ಯಾವುದೇ ಆಯ್ಕೆ ಇರುವುದಿಲ್ಲ.

13. ***ಸರಳ ವರ್ಮ (ಶ್ರೀಮತಿ) ಹಾಗೂ ಇತರರು –ವಿರುದ್ಧ– ದೆಹಲಿ ಸಾರಿಗೆ ನಿಗಮ ಮತ್ತು ಮತ್ತೊಬ್ಬರು*** [8] ಪ್ರಕರಣದಲ್ಲಿ, ಬಲಿಯಾದ ವ್ಯಕ್ತಿಯು 40ಕ್ಕಿಂತ ಹೆಚ್ಚಿನ ವಯಸ್ಸಿನವನಾದರೆ, 'ಭವಿಷ್ಯದ ಆದಾಯ ನಷ್ಟ' ಶೀರ್ಷಿಕೆಯಡಿಯಲ್ಲಿ

8. (2000)6 ಎಸ್‌ಸಿಸಿ 121

ಲೆಕ್ಕಾಚಾರ ಮಾಡುವಾಗ ಆತನ ವಾರ್ಷಿಕ ಆದಾಯದಲ್ಲಿ ಶೇ.30ರಷ್ಟನ್ನು ತೆಗೆದುಕೊಳ್ಳಬೇಕೆಂಬ ಷರತ್ತನ್ನು ವಿಧಿಸಲಾಗಿರುತ್ತದೆ. ಆದ್ದರಿಂದ ಗಾಡಿಗೆಪ್ಪ ಗಳಿಸುತ್ತಿದ್ದ ವಾರ್ಷಿಕ ಆದಾಯದ ಶೇ. 30ರಷ್ಟನ್ನು ತೆಗೆದುಕೊಂಡು, ಈ ನ್ಯಾಯಾಲಯವು 'ಭವಿಷ್ಯದ ಆದಾಯ ನಷ್ಟ'ದ ಪ್ರವರ್ಗದಡಿಯಲ್ಲಿ 2,35,217/– ರೂ.ಗಳ ಪರಿಹಾರವನ್ನು ಅಪೀಲುದಾರರಿಗೆ ನೀಡಿರುತ್ತದೆ.

14. ವಾಸ್ತವವಾಗಿ, ನಮ್ಮ ದೇಶದಲ್ಲಿ ವಿಧವೆಯಾಗಿ ಜೀವನ ಮಾಡುವುದು ಅತ್ಯಂತ ದಯನೀಯವಾದುದಾಗಿರುತ್ತದೆ. ಒಮ್ಮೆ ಮಹಿಳೆ ವಿಧವೆಯಾದಳೆಂದರೆ, ಆಕೆ ತನ್ನ ತಂದೆ ತಾಯಿಯ ಕುಟುಂಬವನ್ನೇ ಇಲ್ಲವೇ ತನ್ನ ಅತ್ತೆ ಮಾವಂದಿರ ಕುಟುಂಬವನ್ನೋ ಆಶ್ರಿಸಲೇಬೇಕಾಗಿರುತ್ತದೆಂದು ಹೇಳಲು ಮನಸ್ಸು ಭಾರವಾಗುತ್ತಿದೆ. ಆಕೆಯನ್ನು ಅಮಂಗಳಕಾರಕ ವ್ಯಕ್ತಿಯೆಂದು ಪರಿಗಣಿಸಿ, ವ್ಯಂಗ್ಯವಾಗಿ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾಳೆ; ಆದರೂ ಆಕೆಯನ್ನು ಒಬ್ಬ ಆದರ್ಶ ತಾಯಿಯನ್ನಾಗಿ ಅಥವಾ ಆದರ್ಶ ಪತ್ನಿಯನ್ನಾಗಿ ನಿರೀಕ್ಷಿಸಲಾಗುತ್ತಿರುತ್ತದೆ. ಆಕೆ ತನ್ನ ಮಕ್ಕಳನ್ನು ಹೆಚ್ಚು ಸಭ್ಯರನ್ನಾಗಿಯೂ, ಶಿಕ್ಷಿತರನ್ನಾಗಿಯೂ ಮಾಡಬೇಕೆಂದು ನಿರೀಕ್ಷಿಸುತ್ತದೆ. ಈಕೆಗೆ ಇನ್ನು ಮುಂದೆ ತನ್ನ ಪತಿಯಿಂದ ಪ್ರೀತಿ, ಕಾಳಜಿ ಹಾಗೂ ನೆರವು, ಹಣಕಾಸು ಸಹಾಯ ಯಾವುದೂ ದೊರೆಯದಿದ್ದರೂ, ಪತಿಯ ಮರಣದಿಂದ ಇದ್ದಕ್ಕಿದ್ದ ಹಾಗೆ ಉಂಟಾದ ಶೂನ್ಯತೆಯೊಂದಿಗೆ ಈಕೆ ಎಲ್ಲವನ್ನೂ ನಿರ್ವಹಿಸಬೇಕೆಂದು ನಿರೀಕ್ಷಿಸಲಾಗುತ್ತದೆ. ನಿರ್ದಿಷ್ಟವಾಗಿ, ಆಕೆಯ ಮಕ್ಕಳು ಹಾಗೂ ಸಾಮಾನ್ಯವಾಗಿ ಸಮಾಜ, ಅಂಥ ಶೂನ್ಯತೆಯನ್ನು ತುಂಬಿ, ಎಲ್ಲಾ ಸಂದರ್ಭಗಳನ್ನು ನಿಭಾಯಿಸಿ, ಹೆಚ್ಚು ಕಡಿಮೆ 'ಭಾರತ ಮಾತೆ' ಯಂತೆ ಅವಳು ತನ್ನ ಕರ್ತವ್ಯಗಳನ್ನು ನಿಭಾಯಿಸಬೇಕೆಂದು ನಿರೀಕ್ಷಿಸುತ್ತದೆ. ಈಕೆಯನ್ನು ಸಮಾಜ ಒಂದಿಷ್ಟು ಕನಿಕರದಿಂದ ನೋಡದೆ, ಅತ್ಯಂತ ನಿರ್ಲಕ್ಷಿಸಿ, ಅಮಾನವೀಯವಾಗಿ, ಪಶುವಿನಂತೆ ನಡೆಸಿಕೊಳ್ಳುತ್ತಲೇ ಇಷ್ಟೆಲ್ಲಾ ನಿರೀಕ್ಷಿಸುತ್ತದೆ. ಲಿಂಗ ಸಮಾನತೆ ಯುಗದಲ್ಲಿಯೂ ಕೂಡ, ಇನ್ಶೂರೆನ್ಸ್ ಕಂಪನಿಯ ಪರ ಮಾನ್ಯ ನ್ಯಾಯವಾದಿಗಳು, ವಿಧವೆಗೆ ಅವಲಂಬನ ನಷ್ಟದ ಪ್ರವರ್ಗದಲ್ಲಿ ನ್ಯಾಯಯುತವಾದ ಹಾಗೂ ಯುಕ್ತವಾದ ಪರಿಹಾರ ನೀಡಲಾಗಿರುವುದರಿಂದ, ಆಕೆಯ ಪತಿಯ ಹಠಾತ್ ಮರಣದಿಂದ ಉದ್ಭವವಾದ

ಭಾವನಾತ್ಮಕ, ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಶೂನ್ಯತೆಗೆ ಸಂಬಂಧಿಸಿದಂತೆ ಕೇವಲ ಸಾಂಕೇತಿಕ ಪರಿಹಾರದ ಅವಶ್ಯಕತೆ ಇರುತ್ತದೆಂದು ವಾದಿಸಿರುವುದು ನನಗೆ ಅತ್ಯಂತ ಆಶ್ಚರ್ಯವನ್ನು ಉಂಟು ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ, ***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು 'ಸಾಂಗತ್ಯ' ಪರಿಕಲ್ಪನೆಯನ್ನು ಅತ್ಯಂತ ವಿಸ್ತೃತವಾಗಿ ಚರ್ಚಿಸಿರುತ್ತದೆ. ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"ಕಾನೂನಿನ ಪರಿಭಾಷೆಯಲ್ಲಿ, 'ಸಾಂಗತ್ಯ' ಎಂದರೆ, ಆತ ಅಥವಾ ಆಕೆಯ ಸಂಗಾತಿಯೊಂದಿಗಿನ, ಒಡನಾಟ, ಕಾಳಜಿ, ನೆರವು, ಸಮಾಧಾನ, ಮಾರ್ಗದರ್ಶನ, ಸಾಮರಸ್ಯ, ನೆಮ್ಮದಿ ಹಾಗೂ ಲೈಂಗಿಕ ಸಂಬಂಧಗಳಿಗೆ ಜೊತೆಯಾಗುವ ಹಕ್ಕು ಹಣಕಾಸೇತರ ಹಾನಿಗಳ ಶೀರ್ಷಿಕೆಗಳನ್ನು ನಮ್ಮ ನ್ಯಾಯಾಲಯಗಳು ಯುಕ್ತವಾಗಿ ಅರ್ಥೈಸಿಕೊಂಡಿರುವುದಿಲ್ಲ. ಸಾಂಗತ್ಯ, ಪ್ರೀತಿ, ಕಾಳಜಿ ಹಾಗೂ ಸಂರಕ್ಷಣೆ ಮುಂತಾದವುಗಳ ನಷ್ಟವನ್ನು, ಪತಿ ಯಾ ಪತ್ನಿ ಪಡೆದುಕೊಳ್ಳಲು ಅರ್ಹಳಾ/ನಾಗಿದ್ದು, ಅದನ್ನು ಸೂಕ್ತವಾಗಿ ನೀಡಬೇಕಾಗಿರುತ್ತದೆ. ಸಾಂಗತ್ಯ ನಷ್ಟಕ್ಕೆ ಸಂಬಂಧಿಸಿದ ಹಣಕಾಸೇತರ ಹಾನಿಯ ಪರಿಕಲ್ಪನೆಯು, ಪ್ರಪಂಚದ ಇತರೆಡೆಗಳಲ್ಲೀ ಅದರಲ್ಲೂ ನಿರ್ದಿಷ್ಟವಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ ಪರಿಹಾರ ನೀಡುವ ಐತೀರ್ಪಿನ ಬಹು ಮುಖ್ಯ ಶೀರ್ಷಿಕೆಗಳಲ್ಲಿ ಒಂದಾಗಿರುತ್ತದೆ. ಅಲ್ಲದೆ, ಆಂಗ್ಲ ನ್ಯಾಯಾಲಯಗಳು, ತಾತ್ಕಾಲಿಕ ಅಸಮರ್ಥತೆಯ ಅವಧಿಗೂ ಕೂಡ ಪರಿಹಾರವನ್ನು ಪಡೆಯಲು ಪತಿ/ಪತ್ನಿಯ ಹಕ್ಕನ್ನು ಮಾನ್ಯ ಮಾಡುತ್ತವೆ. ಸಾಂಗತ್ಯದ ನಷ್ಟದಿಂದ, ಮುಂಬರುವ ವರ್ಷಗಳಲ್ಲಿ ಪತಿ ಯಾ ಪತ್ನಿಯ ಪ್ರೀತಿ, ಸಮಾಧಾನ, ನೆಮ್ಮದಿ, ಸಾಂಗತ್ಯ, ಒಡನಾಟ, ನೆರವು, ರಕ್ಷಣೆ, ಕಾಳಜಿ*

*ಹಾಗೂ ಲೈಂಗಿಕ ಸಂಬಂಧಗಳಿಗೆ ಸಂಬಂಧಿಸಿದಂತೆ ನಷ್ಟವನ್ನು ಭರಿಸುವ ಪ್ರಯತ್ನವನ್ನು ನ್ಯಾಯಾಲಯಗಳು ಮಾಡಿರುತ್ತವೆ. ಇತರೆ ದೇಶಗಳು ಹಾಗೂ ಇತರೆ ಅಧಿಕಾರ ವ್ಯಾಪ್ತಿಯಲ್ಲಿ ಐತೀರ್ಪು ನೀಡಿದ ಪರಿಹಾರಕ್ಕೆ ಭಿನ್ನವಾಗಿ, ಹಣಕಾಸೇತರ ನಷ್ಟಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪರಿಹಾರವನ್ನು ನೀಡಿದ ಕಾನೂನು ಸಮ್ಮತ ವಾರಸುದಾರರನ್ನು ಹೊರತುಪಡಿಸುವುದರಿಂದ, ಈ ಶೀರ್ಷಿಕೆಯಡಿಯಲ್ಲಿ ಹೆಚ್ಚಿನ ಮೊಬಲಗಿನ ಐತೀರ್ಪನ್ನು ನೀಡುವುದು ಸರಿಯಾದುದಾಗಿರುವುದಿಲ್ಲ. ಹಾಗಾಗಿ, ಸಾಂಗತ್ಯ ನಷ್ಟಕ್ಕೆ ಸಂಬಂಧಿಸಿದಂತೆ ಕನಿಷ್ಠ ಒಂದು ಲಕ್ಷ ರೂಪಾಯಿಗಳ ಐತೀರ್ಪನ್ನು ನ್ಯಾಯಾಲಯಗಳು ನೀಡುವುದು ನ್ಯಾಯಯುತವು ಹಾಗೂ ಯುಕ್ತವಾದುದು ಆಗಿರುತ್ತದೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ".*

15. ಮೇಲೆ ವ್ಯಕ್ತಪಡಿಸಿದ ಅಭಿಪ್ರಾಯದಲ್ಲಿ, ಸರ್ವೋಚ್ಚ ನ್ಯಾಯಾಲಯವು, "ಹಣಕಾಸೇತರ ಸಾಂಗತ್ಯಕ್ಕೆ ಸಂಬಂಧಿಸಿದ ಹಾನಿಗಳ ಶೀರ್ಷಿಕೆಗಳನ್ನು ನಮ್ಮ ನ್ಯಾಯಾಲಯಗಳು ಸರಿಯಾಗಿ ಅರ್ಥೈಸಿಕೊಂಡಿರುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿರುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ. ಅಲ್ಲದೆ, ಇದು ಸಾಂಗತ್ಯ ನಷ್ಟಕ್ಕೆ ಸಂಬಂಧಿಸಿದಂತೆ ಕನಿಷ್ಠ ಒಂದು ಲಕ್ಷ ರೂಪಾಯಿಗಳ ಐತೀರ್ಪನ್ನು ನ್ಯಾಯಾಲಯಗಳು ನೀಡುವುದು ನ್ಯಾಯಯುತವು ಹಾಗೂ ಯುಕ್ತವಾದುದು ಆಗಿರುತ್ತದೆಂಬ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ. (ಇದಕ್ಕೆ ನನ್ನಿಂದ ಒತ್ತು ನೀಡಲಾಗಿರುತ್ತದೆ). ಆದ್ದರಿಂದ ಕೇವಲ ಸಾಂಕೇತಿಕ ಮೊಬಲಗನ್ನು ಸಂದಾಯ ಮಾಡಬೇಕಾದ ಅಗತ್ಯವಿರುತ್ತದೆಂದು ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರು ಎತ್ತಿರುವ ವಾದವು, ***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ವಿರುದ್ಧವಾದುದಾಗಿರುತ್ತದೆ.

16. ಅಪಘಾತದಲ್ಲಿ ತನ್ನ ಪತಿಯನ್ನು ಹಠಾತ್ತಾಗಿ ಕಳೆದುಕೊಂಡಂಥ, ಹದಿ ಹರೆಯದ ಮಗನನ್ನು ಪೊರೆಯುವ ಜವಾಬ್ದಾರಿಯನ್ನು ಅನಿರೀಕ್ಷಿತವಾಗಿ ಒಬ್ಬ ನಲವತ್ತರ ವಯೋಮಾನದ ಹೆಣ್ಣು ಹೊತ್ತಿರುವಂಥ ವಾಸ್ತವಾಂಶವಿದ್ದರೂ, ಇದ್ದಕ್ಕಿದ್ದಹಾಗೆ ತನ್ನ ಹೆಗಲಿನ ಮೇಲೆ ಬಿದ್ದ ಹೊರೆಗಳನ್ನು ಹೊತ್ತಿದ್ದರೂ, ಮಾನ್ಯ ನ್ಯಾಯಾಧಿಕರಣವು, ಆಕೆ ಪರಿತಪಿಸುತ್ತಿರುವ ಸಾಂಗತ್ಯ ನಷ್ಟಕ್ಕೆ ಸಂಬಂಧಿಸಿದಂತೆ 20,000/- ರೂ.ಗಳ ಮೊಬಲಗನ್ನು ನೀಡಿರುವುದು ಅತ್ಯಂತ ಶೋಚನೀಯವಾದ ಸಂಗತಿಯಾಗಿರುತ್ತದೆ. ಆದ್ದರಿಂದ, ಇದನ್ನು ಗಮನದಲ್ಲಿಟ್ಟುಕೊಂಡು, ಸರ್ವೋಚ್ಚ ನ್ಯಾಯಾಲಯವು ***ರಾಜೇಶ್ ಮತ್ತು ಇತರರು*** (ಹಿಂದೆ ಹೇಳಿದ) ಪ್ರಕರಣದಲ್ಲಿ ವಿಧಿಸಿದಂತೆ, ಈ ನ್ಯಾಯಾಲಯವೂ ಸಹ, ಅಪೀಲುದಾರ ಸಂ.1 ಕ್ಕೆ 20,000/- ರೂ.ಗಳಿಂದ 1,00,000/- ರೂ.ಗಳಿಗೆ 'ಸಾಂಗತ್ಯ ನಷ್ಟ'ವನ್ನು ಶೀರ್ಷಿಕೆಗೆ ಸಂಬಂಧಿಸಿದಂತೆ ಪರಿಹಾರವನ್ನು ಹೆಚ್ಚಿಸಿರುತ್ತದೆ.

17. ಕೇವಲ ಹದಿನಾರರ ಹರೆಯದ ಎಳೆಯ ಹುಡುಗ, ಜೀವನದ ಏಳು-ಬೀಳುಗಳ ಬಗ್ಗೆ ಮಾರ್ಗದರ್ಶನ ನೀಡುವಂಥ, ತನ್ನ ಜೀವನದ ತೊಡರುಗಳ ಬಗ್ಗೆ ಮಾರ್ಗದರ್ಶನ ನೀಡುವಂಥ, ತಾನು ತೊಂದರೆಗೆ ಸಿಲುಕಿದಾಗ ಭರವಸೆ ನೀಡುವಂಥ, ತನ್ನ ಜೀವನದ ಸ್ಮರಣೀಯ ಸಂದರ್ಭಗಳಲ್ಲಿ ಹರಸುವಂಥ ತಂದೆ, ಅಪಘಾತವೆಂಬ ದುರಂತದಿಂದ ಹಠಾತ್ತನೆ ತನ್ನ ತಂದೆಯನ್ನು ಕಳೆದುಕೊಂಡಂಥ ನತದೃಷ್ಟ ಹಾಗೂ ಜೀವನವಿಡೀ ತಂದೆಯ ಹಂಬಲದಲ್ಲೇ ಕಳೆಯಬೇಕಾದಂಥ ನತದೃಷ್ಟ ಬಾಲಕನ ಜೀವನದ ಹಾದಿ ತುಂಬಾ ದುಸ್ತರವೇ ಆಗಿರುತ್ತದೆ. ಇಂಥ ಅಪೀಲುದಾರ 2 ಈತನಿಗೆ ಮಾನ್ಯ ನ್ಯಾಯಾಧಿಕರಣವು ಒಂದೇ ಒಂದು ಪೈಸೆಯನ್ನು ನೀಡಿರುವುದಿಲ್ಲ. ಆದ್ದರಿಂದ, ಈ ನ್ಯಾಯಾಲಯವು, ಅಪೀಲುದಾರ ಸಂಖ್ಯೆ 2 ಇವನಿಗೆ 'ಪ್ರೀತಿ ಹಾಗೂ ವಾತ್ಸಲ್ಯದ ನಷ್ಟ' ಶೀರ್ಷಿಕೆಯಡಿಯಲ್ಲಿ 50,000/- ರೂ.ಗಳ ಪರಿಹಾರವನ್ನು ನೀಡಿರುತ್ತದೆ.

18. ಸಾವು ದೀರ್ಘಕಾಲೀನವಾಗಿ ತುಟ್ಟಿಯಾಗಿರುವುದಿಲ್ಲ. ಆದರೆ ವ್ಯಕ್ತಿಯು ಮೃತನಾದೊಡನೆ, ಕುಟುಂಬವು ಹಣಕಾಸು ತೊಂದರೆಯನ್ನು ಅನುಭವಿಸುತ್ತಾ

ಆರ್ಥಿಕವಾಗಿ ತತ್ತರಿಸಿ ಹೋಗುತ್ತದೆ. ಸಾವು, ಅಂತ್ಯಸಂಸ್ಕಾರದ ವಿಧಿವಿಧಾನಗಳಲ್ಲಿ ಮಾತ್ರವಲ್ಲದೆ, ಆ ತರುವಾಯದ ಉತ್ತರಾಧಿಕ್ರಿಯೆಗಳಲ್ಲಿಯೂ ಕುಟುಂಬದ ಹಣಕಾಸನ್ನು ಕಬಳಿಸಿಬಿಡುತ್ತದೆ. ಅಂತ್ಯಸಂಸ್ಕಾರಗಳು ಹಾಗೂ ಅದಕ್ಕೆ ಸಂಬಂಧಿಸಿದ ಇತರೆ ಸಾಂಪ್ರದಾಯಿಕ ಆಚರಣೆಗಳನ್ನು ನಡೆಸಲು 2013ನೇ ವರ್ಷದಲ್ಲಿ ನ್ಯಾಯಾಧಿಕರಣವು, 'ಶವದ ಸಾಗಣೆ, ಅಂತ್ಯಸಂಸ್ಕಾರ, ಉತ್ತರಾಧಿಕ್ರಿಯೆಗಳ' ಶೀರ್ಷಿಕೆಯಡಿಯಲ್ಲಿ ಅಪೀಲುದಾರರಿಗೆ ನೀಡಿರುವಂಥ ಮೊಬಲಗು 10,000/– ರೂ.ಗಳಾಗಿದ್ದು, ಖಂಡಿತ ಅದಕ್ಕಿಂತ ಹೆಚ್ಚಿನ ಹಣವನ್ನು ಈ ಸಂಬಂಧದಲ್ಲಿ ಸದರಿ ಕುಟುಂಬವು ಭರಿಸಿರುತ್ತವೆ. ಆದ್ದರಿಂದ, ಈ ನ್ಯಾಯಾಲಯವು ಸದರಿ ಶೀರ್ಷಿಕೆಯಡಿಯಲ್ಲಿ ನೀಡಿರುವ 10,000/– ರೂ.ಗಳಿಗೆ ಬದಲಾಗಿ 25,000/– ರೂ.ಗಳಿಗೆ ಹೆಚ್ಚಿಸಿರುತ್ತದೆ.

19. ಮೇಲೆ ಹೇಳಿದ ಕಾರಣಗಳಿಗಾಗಿ, ಅಪೀಲನ್ನು ಈ ಮೂಲಕ ಅಂಗೀಕರಿಸಲಾಗಿರುತ್ತದೆ. 04.03.2015ನೇ ದಿನಾಂಕದ ಪ್ರಶ್ನಿತ ಐತೀರ್ಪನ್ನು ಮಾರ್ಪಾಡುಗೊಳಿಸಲಾಗಿರುತ್ತದೆ. ಅಪೀಲುದಾರರು, ನ್ಯಾಯಾಧಿಕರಣವು ಐತೀರ್ಪು ನೀಡಲಾಗಿದ್ದ 11,37,091/– ಲಕ್ಷ ರೂ.ಗಳ ಪರಿಹಾರಕ್ಕೆ ಪ್ರತಿಯಾಗಿ 15,17,308/– ಲಕ್ಷಗಳ ಒಟ್ಟು ಪರಿಹಾರಕ್ಕೆ ಅರ್ಹರಾಗಿದ್ದು ಅದು ಈ ಮುಂದಿನಂತಿರುತ್ತದೆ:

| | |
|---|---|
| ಅವಲಂಬನ ನಷ್ಟ | ರೂ.7,84,056–00 |
| ಭವಿಷ್ಯದ ಆದಾಯ ನಷ್ಟ | ರೂ.2,35,217–00 |
| ಸಾಂಗತ್ಯದ ನಷ್ಟ | ರೂ.1,00,000–00 |
| ಪ್ರೀತಿ ಹಾಗೂ ವಾತ್ಸಲ್ಯದ ನಷ್ಟ | ರೂ. 50,000–00 |
| ಸಂಪದದ ನಷ್ಟ | ರೂ.10,000–00 |

| | |
|---|---|
| ನಿರೀಕ್ಷಣೆಯ ನಷ್ಟ | ರೂ.10,000–00 |
| ಶವದ ಸಾಗಣೆ, ಅಂತ್ಯ ಸಂಸ್ಕಾರ ಹಾಗೂ ಉತ್ತರಾಧಿಕ್ರಿಯೆಗಳ ವೆಚ್ಚ | ರೂ.25,000–00 |
| ವೈದ್ಯಕೀಯ ವೆಚ್ಚಗಳು | ರೂ.3,03,035–00 |
| ಒಟ್ಟು | ರೂ.15,17,308–00 |

ಇನ್ಶೂರೆನ್ಸ್ ಕಂಪನಿಗೆ, ಈಗಾಗಲೇ ಠೇವಣಿ ಮಾಡಿರುವ ಮೊಬಲಗನ್ನು ಕಡಿತಗೊಳಿಸಿ ಕೂಡಲೇ ಮಾನ್ಯ ನ್ಯಾಯಾಧಿಕರಣದೊಂದಿಗೆ, ವಾರ್ಷಿಕ ಶೇ.6ರ ದರದಲ್ಲಿ ಅದರ ಬಡ್ಡಿಯೊಂದಿಗೆ ಮೊಬಲಗನ್ನು ಠೇವಣಿ ಮಾಡಲು ನಿರ್ದೇಶಿಸಲಾಗಿರುತ್ತದೆ. ನ್ಯಾಯಾಧಿಕರಣಕ್ಕೆ ಅಪೀಲುದಾರ ಸಂ.1 ಹಾಗೂ 2 ಇವರುಗಳಿಗೆ, ಐತೀರ್ಪಿಗನುಸಾರವಾಗಿ ಮೊಬಲಗನ್ನು ಹಂಚಿಕೆ ಮಾಡಿ, ಅಪೀಲುದಾರ ಸಂ.2 ಇವರಿಗೆ ಸಂದಾಯ ಮಾಡಬಹುದಾದ ಮೊಬಲಗನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿ ಮಾಡಲು ನಿರ್ದೇಶಿಸಲಾಗಿರುತ್ತದೆ. ನಿಶ್ಚಿತ ಠೇವಣಿಯು, ನಿಯತವಾಗಿ ಬಡ್ಡಿಯನ್ನು ಪಡೆದುಕೊಳ್ಳುವ ಸ್ವಇಚ್ಛೆಯೊಂದಿಗೆ ವಾರ್ಷಿಕವಾಗಿ ಸ್ವಯಂಚಾಲಿತವಾಗಿ ನವೀಕರಣಗೊಳ್ಳತಕ್ಕದ್ದು.

---